# ಪಂಪ–ರನ್ನರ ಕಾವ್ಯಗಳಲ್ಲಿ ರಸ ಪ್ರಜ್ಞೆ.

**ಡಾ. ದೊಡ್ಡನಾಯ್ಕ ಹೆಚ್.**
ಉಪನ್ಯಾಸಕರು
ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
ಶಿವಮೊಗ್ಗ.

**Article Link: https://aksharasurya.com/2023/09/dodda-naik-h/**

## ABSTRACT:

ವಿಶ್ವ ಸಾಹಿತ್ಯಕ್ಕೆ ಭಾರತೀಯ ಸಾಹಿತ್ಯದ ಪರಮ ಕೊಡುಗೆ ಎಂದರೆ ರಸ ಸಿದ್ದಾಂತ. ಕಾವ್ಯಕ್ಕೆ ರಸವೇ ಚಕ್ರವರ್ತಿ. ಈ ರಸ ಸಿದ್ಧಾಂತವನ್ನು ಪ್ರತಿಪಾದಿಸಿದ ಪ್ರಥಮ ಅಲಂಕಾರಿಕ ಭರತ. ಹೀಗಾಗಿ ಭಾರತೀಯ ಕಾವ್ಯಮೀಮಾಂಸೆಯಲ್ಲಿ ರಸ ಸಿದ್ಧಾಂತವು ಅಡಿಗಲ್ಲಾಗಿ ಕಾಣಿಸುತ್ತದೆ. ರಸ ಸಿದ್ಧಾಂತದ ಬಗೆಗಿನ ಚರ್ಚೆಗಳು ಕನ್ನಡ ಸಾಹಿತ್ಯ ಲೋಕದಲ್ಲಿ ನಿರಂತರವಾಗಿ ನಡೆಯುತ್ತಲೇ ಇದೆ. ರಸ ಶಬ್ದದ ಪ್ರಯೋಗ ಅತ್ಯಂತ ಪ್ರಾಚೀನ ವೇದಗಳ ಕಾಲದಲ್ಲಿಯೇ ಬಳಕೆಯಾಗಿದೆ. ರಸನಿಷ್ಪತಿಯ ಬಗೆಗೆ ಹಲವು ವ್ಯಾಖ್ಯಾನಗಳಿವೆ. ಸಾಮಾನ್ಯವಾಗಿ ರಸ ಎಂದರೆ ನಾಟಕ, ಕಾವ್ಯಕಲೆಗಳನ್ನು ನೋಡುವುದರಿಂದ ನಮಗಾಗಬಹುದಾದ ಮಾನಸಿಕ ತೃಪ್ತಿ ಅಥವಾ ಆನಂದವನ್ನು ರಸ ಎಂದು ಕರೆಯಬಹುದು. ಆದಿಕವಿ ಪಂಪನು ತನ್ನ ಕಾವ್ಯಗಳಲ್ಲಿ ರಸ ಸಿದ್ಧಾಂತದ ಮಟ್ಟುಗಳನ್ನು ಅತ್ಯಂತ ವಿವೇಚನೆಯಿಂದ ಪ್ರತಿಪಾದಿಸಿರುವುದನ್ನು ನಾವಿಲ್ಲಿ ಕಾಣಬಹುದು. ಕನ್ನಡ ಕಾವ್ಯಮೀಮಾಂಸೆಯು ಜನಪರ ಮೂಲದಿಂದ ಪ್ರಾರಂಭವಾದರೂ ಅದಕ್ಕೆ ಸೈದಾಂತಿಕ ನಿಲುವು ಮತ್ತು ರೂಪರೇಷೆಗಳನ್ನು ಕೊಟ್ಟವನು ಪಂಪ. ಪಂಪ ಭಾರತದಲ್ಲಿ ದುರ್ಯೋಧನ ಭೀಷ್ಮರಿಗೆ ಪಟ್ಟ ಕಟ್ಟಿದ ಸಂದರ್ಭವನ್ನು ನೆನಪು ಮಾಡಿಕೊಂಡರೆ, ಕರ್ಣನ ಯುದ್ಧ ಉತ್ಸಾಹದ ಮಾತುಗಳು ವೀರರಸವನ್ನ ಪ್ರತಿಪಾದಿಸಿದರೆ, ಭೀಷ್ಮರ ಬುದ್ಧಿ ಮಾತುಗಳು ಕರುಣರಸದಂತೆ ಕಾಣಿಸುತ್ತದೆ. ಕೌರವನಿಂದ ದ್ರೌಪದಿಗಾದ ಅವಮಾನವನ್ನು ಸಹಿಸದೆ ಭೀಮನು ಮಾಡಿ ಪ್ರತಿಜ್ಞೆಯೂ ಕೂಡ ವೀರರಸವನ್ನು ಸೂಚಿಸುತ್ತದೆ. ಹೀಗೆ ವೀರ, ಕರುಣ, ಹಾಸ್ಯ, ರೌದ್ರ, ಭಯಾನಕ ಮತ್ತು ಅದ್ಭುತ ಇತ್ಯಾದಿ ರಸಗಳು ಪ್ರತಿಪಾದನೆಯಾಗಿರುವುದನ್ನು ಗುರುತಿಸಬಹುದು. ಅಲ್ಲದೆ ಶಕ್ತಿ ಕವಿ ರನ್ನನು ಕೂಡ ತನ್ನ ಗದಾಯುದ್ಧದಲ್ಲಿ ರಸ ಸಿದ್ಧಾಂತದ ಮಟ್ಟುಗಳನ್ನು ಪ್ರತಿಪಾದಿಸಿದ್ದಾನೆ. ರನ್ನನು ಪಂಪನ ಪಥವನ್ನು ಅನುಸರಿಸಿದವನಾಗಿರುವುದ–ರಿಂದ ಪಂಪನ ಹಾಗೆ ತನ್ನ ಕಾವ್ಯದಲ್ಲಿ ರಸಗಳ ಕುರಿತು ನಿಲುವುಗಳನ್ನು ಪ್ರತಿಪಾದಿಸಿದಾನೆ. 'ಆರವಂ ನಿರ್ಜಿತ ಕಂಠೀರವಮಂ ನೀರಸ್ತ ಘನರವಮಂ...' ವೈಶಂಪಾಯನ ಸರೋವರದಲ್ಲಿ ಅಡಗಿದ ದುರ್ಯೋಧನನನ್ನು ಭೀಮನು ಮೊದಲಿಸುವ ಧ್ವನಿಯು ರೌದ್ರ ರಸಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ದುರ್ಯೋಧನನ

ನೆಲೆಯಲ್ಲಿ ಇದು ಕರಣರಸವಾಗಿ ಕಂಡರೆ, ಭೀಮನ ನೆಲೆಯಲ್ಲಿ ಇದು ವೀರ ರಸವಾಗಿ ಕಾಣುತ್ತದೆ. ಅಕ್ಷೋಹಿಣಿ ಸೈನ್ಯದ ಒಡೆಯನಾದ ದುರ್ಯೋಧನನು ತನ್ನ ಮಗ, ತಮ್ಮ, ಸ್ನೇಹಿತ ಕರ್ಣ, ದ್ರೋಣ ಮೊದಲಾದವರನ್ನು ಯುದ್ಧಭೂಮಿಯಲ್ಲಿ ಕಳೆದುಕೊಂಡು ಹೆಣಗಳನ್ನು ಅರಸುತ್ತ ಬರುವ ದೃಶ್ಯ ಕರುಣರಸಕ್ಕೆ ಸಾಕ್ಷಿಯಾಗುತ್ತದೆ. ಹೀಗೆ ರನ್ನನ ಕಾವ್ಯಗಳಲ್ಲಿ ನವರಸಗಳ ಪ್ರತಿಪಾದನೆಯ ಆಗಿರುವುದನ್ನು ಗುರುತಿಸಬಹುದು. ಹೀಗೆ ಪಂಪ ಮತ್ತು ರನ್ನರ ಕಾವ್ಯಗಳಲ್ಲಿ ಭರತನು ಹೇಳಿದ ಎಂಟು ರಸಗಳು ಮತ್ತು ಉದ್ಭಟ ಕವಿ ಹೇಳಿದ ಶಾಂತರಸವನ್ನು ಸೇರಿ ನವರಸಗಳ ಪ್ರತಿಪಾದನೆಯು ಆಗಿರುವುದನ್ನು ಗುರುತಿಸಬಹುದು. ಅಲ್ಲದೆ ಭಟ್ಟಲೊಲ್ಲಟ, ಭಟ್ಟನಾಯಕ, ಶ್ರೀಶಂಕುಕ ಮೊದಲಾದವರು ರಸ ಸಿದ್ಧಾಂತದ ಬಗೆಗೆ ವಾದ ವಿವಾದಗಳ ವೇದಿಕೆಯನ್ನೇ ಸೃಷ್ಟಿ ಮಾಡಿದ್ದಾರೆ. ಈ ಎಲ್ಲಾ ವಾದ ವಿವಾದಗಳಿಗೆ ಹಾಗೂ ರಸ ಸಿದ್ಧಾಂತದ ವ್ಯಾಖ್ಯಾನಗಳಿಗೆ ಸಂಬಂಧಿಸಿದ ರಸಪ್ರಜ್ಞೆಯ ಹೊಳೆಯು ಪಂಪ ರನ್ನರ ಕಾವ್ಯಗಳಲ್ಲಿ ಹರಿದಿರುವುದನ್ನು ಗುರುತಿಸಬಹುದು. ಪಂಪ ರನ್ನರ ಕಾವ್ಯಗಳಲ್ಲಿ ರಸಪ್ರಜ್ಞೆಯು ಹೊಳೆಯಂತೆ ಹರಿದಿರುವುದು. ಕನ್ನಡಕ್ಕೆ ಕನ್ನಡದೆಯಾದ ಕಾವ್ಯ ಮೀಮಾಂಸೆಯನ್ನು ಕಟ್ಟಲಿಕ್ಕೆ ಬೇಕಾದ ಪರಿಕರಗಳು ಪಂಪ ರನ್ನರ ಕಾವ್ಯಗಳಲ್ಲಿ ಹೇರಳವಾಗಿವೆ. ಸಹೃದಯನ ಓದಿನ ಆಸಕ್ತಿಯು ಕೃತಿಯ ರಸಪ್ರಜ್ಞೆಯನ್ನ ಅವಲಂಬಿಸಿರುತ್ತದೆ. ಈ ವಿಷಯವನ್ನೇ ಈ ನನ್ನ ಲೇಖನದಲ್ಲಿ ಚರ್ಚೆಯನ್ನು ಮಾಡಲಾಗಿದೆ.

## KEYWORDS:

ರನ್ನ, ಗದಾಯುದ್ಧ, ಪಂಪ, ಪ್ರಾಚೀನ ಸಾಹಿತ್ಯ, ವಿಕ್ರಮಾರ್ಜುನ ವಿಜಯ.

ಭಾರತೀಯ ಕಾವ್ಯಮೀಮಾಂಸೆಯಲ್ಲಿ ರಸಪ್ರಜ್ಞೆಯು ಅಡಿಗಲ್ಲೂ ಹೌದು ಮಹಲೂ ಹೌದು. ರಸ ಸಿದ್ಧಾಂತವನ್ನು ಪ್ರತಿಪಾದಿಸಿದ ಪ್ರಥಮ ಅಲಂಕಾರಿಕ ಭರತ. ಈತನ ರಸ ಸಿದ್ಧಾಂತವು ನಾಟಕಕ್ಕೆ ಮಾತ್ರ ಸೀಮಿತವಾಗಿತ್ತು. ಕಾಲಕ್ರಮೇಣ ರಸವೇ ಕಾವ್ಯದ ಜೀವಾಳ ಎಂಬ ಭಾವವು ಬೇರೂರಿತು. 'ರಸ' ಶಬ್ದ ಪ್ರಯೋಗವು ಅತ್ಯಂತ ಪ್ರಾಚೀನವಾದುದು. ವೇದಗಳ ಕಾಲದಲ್ಲಿಯೇ 'ರಸ' ಎಂಬ ಶಬ್ದದ ಬಳಕೆಯಾಗಿರುವುದನ್ನು ಕಾಣಬಹುದು. ಋಗ್ವೇದ ಸಂಹಿತೆಯಲ್ಲಿ 'ರಸ' ಶಬ್ದದ ಪ್ರಯೋಗವಾಗಿದೆ. 'ರಸ' ದ ನಿಷ್ಪತ್ತಿಯನ್ನು ಹರ್ಮಾನ್‌ಗ್ರಾಸ್ ರವರು ಎರಡು ಅರ್ಥದಲ್ಲಿ ನೀಡಿದ್ದಾರೆ. ಒಂದು 'ರಸ್' ಎಂದರೆ ರುಚಿನೋಡು ಎಂದೂ ಇನ್ನೊಂದು ಅರ್ಷೆ ಎಂದರೆ ಹರಿಯುವುದು ಎಂಬರ್ಥ. ರುಚಿನೋಡು ಎಂಬುದರಿಂದ ಉಪ್ಪು, ಹುಳಿ, ಖಾರ ಮೊದಲಾದ ಷಡ್ರಸಗಳು ಸಿದ್ಧವಾದವು ಎಂದಾಗುತ್ತದೆ. ಅರ್ಷೆ ಎಂಬುದರಿಂದ ವನಸ್ಪತಿಗಳ ರಸ, ಸೋಮರಸ, ಯಜ್ಞಪೇಯ ಸಪ್ತಮಧಾತು,

ಮಾದಕಪೇಯ, ಸಾರ, ಹಿತವಾದ ಪೇಯ, ಈ ಏಳು ಅರ್ಥಗಳು ಪ್ರಾಪ್ತಿಸುತ್ತವೆ. ಹೀಗೆ ರಸವು ಅಥರ್ವಣವೇದ, ತೈತ್ತೀರಿಯಾ ಉಪನಿಷತ್ತು, ಭಗವದ್ಗೀತೆ, ಆಯುರ್ವೇದ, ರಾಮಾಯಣದ ಬಾಲಕಾಂಡ. ನಾಟ್ಯಶಾಸ್ತ್ರ ಇತ್ಯಾದಿ ಕೃತಿಗಳಲ್ಲಿ ಕಂಡು ಬರುತ್ತದೆ.

ರಸ ಸೂತ್ರವನ್ನು ಸ್ಪಷ್ಟವಾಗಿ ನಿರೂಪಿಸಿ ರಸ ಮೀಮಾಂಸೆಗೆ ಭದ್ರ ಬುನಾದಿಯನ್ನು ಹಾಕಿದವನು ಭರತನೇ. ಭರತನು ರಸವನ್ನು ಮಾನಸಿಕ ಹಿನ್ನಲೆಯಲ್ಲಿ ವಿಶ್ಲೇಷಿಸಿ ವಿವೇಚಿಸಿರುವುದು ವಿಸ್ಮಯಕಾರಿಯಾಗಿದೆ. ನಾಟ್ಯವನ್ನು ನೋಡಿದ ಮೇಲೆ ಸಹೃದಯ ಅಥವಾ ರಸಿಕ ಪ್ರೇಕ್ಷಕನ ಮೇಲೆ ಅದು ಯಾವ ಪರಿಣಾಮವನ್ನುಂಟುಮಾಡಿತೆಂಬ ಹಿನ್ನಲೆಯನ್ನು ಮುಖ್ಯವಾಗಿರಿಸಿಕೊಂಡು ರಸವನ್ನು ಕುರಿತು ಚರ್ಚಿಸಿದ್ದಾನೆ. ಒಂದು ಕೃತಿಯನ್ನು ಅಭ್ಯಾಸಿಸಿದಾಗ, ಅಭ್ಯಾಸಿಯ ಅಥವಾ ಓದುಗನ ಮೇಲೆ ಯಾವ ಪರಿಣಾಮ ಉಂಟಾಯಿತೆಂಬುದು ಮುಖ್ಯ ಪ್ರಶ್ನೆ. ಈ ಪರಿಣಾಮ, ಈ ಅನುಭವ ಲೋಕಾನುಭವವೇ? ಅಥವಾ ಲೋಕಾನುಭವಕ್ಕಿಂತ ಭಿನ್ನವಾದುದೆ? ಎಷ್ಟರ ಮಟ್ಟಿಗೆ ಭಿನ್ನವಾದುದು? ಮೊದಲಾದ ಪ್ರಶ್ನೆಗಳನ್ನೆಲ್ಲಾ ದೃಷ್ಟಿಯಲ್ಲಿರಿಸಿಕೊಂಡು ಭರತ ರಸವನ್ನು ವಿವೇಚಿಸಿದ್ದಾನೆ.

ಪಂಪನ ಕಾವ್ಯ ಮೀಮಾಂಸೆಯೇ ಕನ್ನಡ ಮೀಮಾಂಸೆ. ಪಂಪನಿಂದ ಇಂದಿನವರೆಗಿನ ಕವಿಗಳ ಕಾವ್ಯಗಳಲ್ಲಿ ಪ್ರಜ್ಞೆಯೇ ರಸದ ಜೀವಾಳ. ಪಂಪನ ಮತ್ತು ರನ್ನರ ಕಾವ್ಯದಲ್ಲಿನ ರಸಪ್ರಜ್ಞೆಯೇ ಇವತ್ತಿನ, ಮುಂದಿನ ರಸಸಿದ್ಧಾಂತಕ್ಕೆ ತಾತ್ವಿಕ ಚೌಕಟ್ಟು ಮತ್ತು ಭದ್ರಬುನಾದಿ. ಪಂಪನ ಆದಿಪುರಾಣದ ಪೂರ್ವರ್ಧದಲ್ಲಿ ಹೆಚ್ಚಾಗಿ ಶೃಂಗಾರದ ಪ್ರಜ್ಞೆಯನ್ನು ಕಾಣಬಹುದು. ಉತ್ತರಾರ್ಧದಲ್ಲಿ ಶೃಂಗಾರ, ವೀರ, ಅದ್ಭುತ ಮತ್ತು ಶಾಂತರಸವನ್ನು ಕಾಣಬಹುದು, ಧಾರ್ಮಿಕ ಕೃತಿಯ ಒಡಲೊಳಗೆ ವೃಷಭನಾಥನ ಜೀವ ತನಗಂಟಿದ ಭೋಗಾಸಕ್ತಿಯನ್ನು ಲಲಿತಾಂಗ, ವಜ್ರಜಂಘ, ಪುರುದೇವರ ಜನ್ಮ-ಜನ್ಮಾಂತರಗಳಿಗೂ ಕೊಂಡೊಯ್ಯುತ್ತದೆ. ಪುರುಚಕ್ರಿಯ ಮಕ್ಕಳಾದ ಭರತ ಬಾಹುಬಲಿಯರ ಪ್ರಸಂಗಗಳಂತು ರಸಘಟ್ಟಗಳು.

ಪಂಪನ ವಿಕ್ರಮಾರ್ಜುನವಿಜಯದಲ್ಲಿ ಅರ್ಜುನ-ಅರಿಕೇಸರಿಯ ಸಮೀಕರಣ. ಅರಿಕೇಸರಿಯೇ ಇಲ್ಲಿ ಕಥಾನಾಯಕ. ದ್ರೌಪದಿ ಅರ್ಜುನನೊಟ್ಟಿಗೆ ಪಟ್ಟಕೇರುವುದಿಲ್ಲ. ದ್ರೌಪದಿ ಅರ್ಜುನನೊಬ್ಬನ ಪತ್ನಿ. ಆದರೂ ಸುಭದ್ರೆಗೆ ಪಟ್ಟ ಕಟ್ಟುವರು. ಪಂಪನ ಮನಸ್ಸು ಕರ್ಣನನ್ನು ಸೆಳೆದಷ್ಟು ದುರ್ಯೋಧನನ ಕಡೆ ಸೆಳೆಯಲಿಲ್ಲ. ಬನವಾಸಿಯ ವರ್ಣನೆಗಳನ್ನು ರಸಮಯವಾಗಿ ಕವಿ ಅನಾವರಣ ಗೊಳಿಸಿದ್ದಾನೆ. ಇಲ್ಲಿ ಕರುಣ, ವೀರ, ಹಾಸ್ಯ, ಶೃಂಗಾರ ಮತ್ತು ಶಾಂತಗಳನ್ನು

ಕಾಣಬಹುದು.

ರನ್ನನ ಅಜಿತನಾಥ ಪುರಾಣದಲ್ಲಿ ಅಜಿತಸ್ವಾಮಿ ಮತ್ತು 2ನೇಯ ಚಕ್ರವರ್ತಿ ಸಗರನ ಚರಿತ್ರೆಯಿದೆ. ಅಜಿತಸ್ವಾಮಿಯ ಚರಿತವು ಪಂಚಕಲ್ಯಾಣಗಳ ವಿಸ್ತೃತ ವರ್ಣನೆಯಾಗಿ ಬಂದರುವುದರಿಂದ ಹೃದ್ಯವಾದುದು. ಇಲ್ಲಿ ನಾಟ್ಯದ ಶೃಂಗಾರ, ನಿಸರ್ಗದ ಅದ್ಭತರಸ ವರ್ಣನೆಗಳಿವೆ. ಗದಾಯುದ್ಧ ಕೃತಿಯಲ್ಲಿ ಭೀಮ, ದುರ್ಯೋಧನ ಪ್ರಮುಖವಾದರೂ ಇದಕ್ಕೆಲ್ಲ ಕಾರಣಗಳು ದ್ರೌಪದಿಯಾಗುತ್ತಾಳೆ. ದುರ್ಯೋಧನನೇ ನಾಯಕ, ವೀರರಸವೇ ಪ್ರಮುಖ ರಸವೆಂದು ರಂ ಶ್ರೀ ಮುಗಳಿಯಾದಿಯಾಗಿ ಅನೇಕ ವಿಮರ್ಶಕರು ಹೇಳಿದ್ದಾರೆ. ದುರ್ಯೋಧನ, ಭೀಮನ ಪಾತ್ರಗಳ ಮೂಲಕ ವೀರ, ಕರುಣ, ಅದ್ಭುತ, ಶಾಂತ, ರೌದ್ರ ಇತ್ಯಾದಿ ರಸಗಳನ್ನು ಗುರುತಿಸಬಹುದು.

ಎಂಟು ಸ್ಥಾಯೀಭಾವವಗಳನ್ನು ಮೂವತ್ಮೂರು ಸಂಚಾರಿ ಭಾವಗಳನ್ನ ಹೇಳಿರುವ ಭರತ ರಸದ ನಿಷ್ಪತಿಃಯನ್ನು ಹೀಗೆ ಹೇಳಿದ್ದಾನೆ."ವಿಭಾವಾನುಭಾವ ವ್ಯಭಿಚಾರಿ ಸಂಯೋಗಾದ್ರಸ ನಿಷ್ಪತಿ:" ಅಂದರೆ ವಿಭಾವ ಅನುಭಾವ ಮತ್ತು ವ್ಯಭಿಚಾರಿಭಾವಗಳ ಸಂಯೋಗದಿಂದ ರಸವು ನಿಷ್ಪನ್ನವಾಗುತ್ತದೆ. ಭರತನ ಈ ಸೂತ್ರ ಸರಳವೆನಿಸಿದರೂ ವಾಸ್ತವವಾಗಿ ಸಂಕೀರ್ಣ. ರಸ ನಿಷ್ಪತ್ತಿಯನ್ನು ನಿರೂಪಿಸುವಾಗ ಭಟ್ಟನಾಯಕ ಸಾಂಖ್ಯ ತತ್ತ್ವಗಳನ್ನು ಅನುಸರಿಸಿದ್ದಾನೆ. ಭಟ್ಟನಾಯಕನ ಪ್ರಕಾರ ರಸ ಉತ್ಪತ್ತಿಯಾಗುವುದಿಲ್ಲ. ಅಭಿನವಗುಪ್ತನು ಪ್ರಾಚೀನರ ಅಭಿಪ್ರಾಯಗಳಲ್ಲಿನ ದೋಷಗಳನ್ನು ನಿವಾರಿಸಿ, ಸಮನ್ವಯಗೊಳಿಸಿದ ಕೀರ್ತಿ ಇತನಿಗೆ ಸಲ್ಲುತ್ತದೆ.

ಪಂಪನ ಆದಿಪುರಾಣದಲ್ಲಿ ಪುರುದೇವನ ಭವವಳಿಗಳಲ್ಲಿ ಒಂದಾದ ವಜ್ರಜಂಘ ಶ್ರೀಮತಿಯರ ಸಾವಿನ ಚಿತ್ರಣವಿರುವ ಪದ್ಯದಲ್ಲಿ ಕರುಣ, ಶೃಂಗಾರ, ಶೋಕರಸಗಳನ್ನು ಗುರುತಿಸುತ್ತೇವೆ.

**ಬಿಡದೆ ಪೊಗೆ ಸುತ್ತೆತೋಳಂ**
**ಸಡಿಲಿಸದಾ, ಪ್ರಾಣವಲ್ಲಭರ್ ಪ್ರಾಣಮನ್ ಅಂ**
**ದೊಡಗಳೆದರ್, ಓವರೋಪರೊ**
**ಳೊಡಸಾಯಲ್ ಪಡೆದರ್, ಇನ್ನವೇಂ ಸಯ್ಪೊಳವೇ?**

ಅವರಿಬ್ಬರನ್ನು ಹೊಗೆಯು ಆವರಿಸಿದ್ದರೂ ಅವರು ಪರಸ್ಪರರನ್ನು ತಬ್ಬಿಕೊಂಡಿರುವುದು ಪ್ರೀತಿಯ ಸಂಕೇತ. ಪ್ರೇಮಿಗಳ ಶೃಂಗಾರ ರಸದ ಸಮಯವದು, ಹಾಗೆಯೇ ಇಬ್ಬರು ಜೊತೆಗೆ ಸಾವನ್ನಪ್ಪಿದರು. ಪ್ರಾಣಬಿಟ್ಟರು ಅಥವಾ ಜೊತೆಯಲ್ಲಿಯೇ ಸಾಯುವುದಕ್ಕಿಂತಲೂ ಬೇರೆ ಪುಣ್ಯವೇನಿದೆ ಎನ್ನುವುದು

ಕರುಣಶೋಕರಸವಾಗಿ ಓದುಗರಲ್ಲಿ ಒಡಮೂಡುವುದು. ಇದು ಪಂಪನು ಓದುಗರಲ್ಲಿ ಮೂಡಿಸುವ ರಸಪ್ರಜ್ಞೆ, ಇದೇ ಕೃತಿಯಲ್ಲಿ ಪಂಪ ಮತ್ತೊಂದು ಕಡೆ ಶಾಂತ, ಅದ್ಭುತ, ವೀರ, ಜುಗುಪ್ಸೆ ರಸದ ಪ್ರಜ್ಞೆಯನ್ನು ಮೂಡಿಸಿದ್ದಾನೆ.

**ಅದು ಸೋದರರೊಳ್ ಸೋದರಂ**
**ಕಾದಿಸುವುದು, ಸುತನ ತಂದೆಯೆಡೆಯೊಳ್ ಬಿಡ**
**ದುತ್ಪಾದಿಸುವುದು ಕೋಪಮನ್, ಅಳ**
**ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್**

ಈ ರಾಜ್ಯ ಸಂಪತ್ತನ್ನು ಬಿಟ್ಟು ಮೋಕ್ಷರಾಜ್ಯವನ್ನು ಸಂಪಾದಿಸುವುದು ಶಾಂತ ರಸದ ಪ್ರಜ್ಞೆ, ಸಹೋದರರ ಮೇಲೆ ಸಹೋದರರನ್ನು, ಮಗನನ್ನ ತಂದೆ ಮೇಲೆ ಎತ್ತಿ ಕಟ್ಟುವ ನೀತಿಯು ಭಯವನ್ನು ವೀರರಸದ ಪ್ರಜ್ಞೆಯನ್ನು ಮೂಡಿಸುತ್ತದೆ. ರಾಜ್ಯ ಲಕ್ಷ್ಮೀಯನ್ನು ನಶ್ವರವಾದುದು ಎಂದು ಭಾವಿಸುವ ಧರ್ಮಗುಣವೇ ಅದ್ಭುತರಸದ ಪ್ರಜ್ಞೆಯನ್ನು ಪಂಪ ಓದುಗರಲ್ಲಿ ಮೂಡಿಸುತ್ತಾನೆ. ಹೀಗೆ ಪಂಪನಲ್ಲಿ ರಸಪ್ರಜ್ಞೆಯು ಕಾವ್ಯದ ಉದ್ದಕ್ಕೂ ಹರಡಿ ರಸನಂದವನ್ನು ಸಹೃದಯನಿಗೆ ನೀಡುತ್ತದೆ.

ಇನ್ನೂ ಪಂಪಭಾರತದಲ್ಲಿನ ಪ್ರತಿಯೊಂದು ಪದ್ಯದಲ್ಲೂ ಪಂಪನು ರಸ ಪ್ರಜ್ಞೆಯನ್ನ ಜತನ ಮಾಡಿದ್ದಾನೆ. ಅದು ಓದುಗನ ರಸಭಾವಕ್ಕೆ ನಾಂದಿ ಹಾಡಬಲ್ಲದು. ನವರಸಗಳ ಅನುಭವವು ಈ ಕಾವ್ಯದಲ್ಲಿ ವಿಹಾರಿಸುವ ಸಹೃದಯನಿಗೆ ಉಣಬಡಿಸುತ್ತಾನೆ ಪಂಪ.

**ಗಂಗಾಸುತಂ ಪೃಥಾಸುತ**
**ರಂ ಗೆಲ್ದೊಡೆ ತಪಕೆ ಪೋಪೆನ್, ಅವರ್ಗಳ್ ಕಯ್ಯೊಳ್**
**ಗಾಂಗೇಯನಳೀದೊಡಹಿತರ**
**ನಾಂ ಗೆಲೆ ತಳ್ತಿರುವೆನ್. ಅನ್ನೇಗಂ ಬಿಲ್ವಿಡಿಯೆಂ**

ಭೀಷ್ಮರು ಪಾಂಡವರನ್ನು ಗೆದ್ದರೆ, ನಾನು ತಪಸ್ಸಿಗೆ ಹೊಗುತ್ತೇನೆ ಎನ್ನುವ ಕರ್ಣನ ಮಾತು ಆವೇಶದಿಂದ ಆಡಿದ ಮಾತಾಗಿ ಕಂಡರೂ ಅದು ತೊಳ್ಬಲದ ಪ್ರಶ್ನೆಯು ಹೌದು.ಬಿಲ್ಲನ್ನು ಹಿಡಿಯುವುದಿಲ್ಲ ಎನ್ನುವ ಮನಸ್ಥಿತಿ ಶಾಂತರಸದ ಪ್ರಜ್ಞೆ, ಒಂದು ವೇಳೆ ಭೀಷ್ಮರು ಸೋತರೆ ನಾನು ಪಾಂಡವರೊಡನೆ ಹೋರಾಡಿ ಗೆಲ್ಲುತ್ತೇನೆ ಎನ್ನುವ ಮಾತು ವೀರತನಕ್ಕೆ ಹೆಮ್ಮೆ ಇದು ವೀರರಸವನ್ನು ಸಹೃದಯಲ್ಲಿ ಮೂಡಿಸುತ್ತದೆ.

ಪಂಪಭಾರತ ಕಾವ್ಯದ ಉದ್ದಗಲಕ್ಕೆ ರಸಪ್ರಜ್ಞೆಯ ಹೊಳೆ ಹರಿದಿದೆ. ಚಲದೊಳ್ ದುರ್ಯೋಧನಂ, ನನ್ನಿಯೊಳಿತನಯಂ, ಗಂಡಿನೋಳ್ ಭೀಮಸೇನಂ ಚಲಕ್ಕೆ

ದುರ್ಯೋಧನ, ಸತ್ಯಕ್ಕೆ ಕರ್ಣ, ಧೈರ್ಯಕ್ಕೆ ಭೀಮ, ಬಲಕ್ಕೆ ಶಲ್ಯ, ಔನ್ನತ್ಯಕ್ಕೆ ಭೀಷ್ಮ, ಬಿಲ್ಲುವಿದ್ಯೆಗೆ ದ್ರೋಣ, ಸಾಹಸಕ್ಕೆ ಅರ್ಜುನ, ನಿರ್ಮಲ ಮನಸ್ಸಿಗೆ ಧರ್ಮರಾಯ ಎನ್ನುವಲ್ಲಿ ಅವರವರ ಸ್ವರೂಪದ ಆಧಾರದ ಮೇಲೆ, ಗುಣಗಳ ಆಧಾರದ ಮೇಲೆ ರಸಪ್ರಜ್ಞೆ ಮೂಡುವುದು, ಹೀಗಾಗಿ ಇಡೀ ಕಾವ್ಯವು ರಸಪ್ರಜ್ಞೆಯಿಂದ ಒಡಮೂಡಿದೆ.

ರನ್ನನ ಎರಡು ಕಾವ್ಯಗಳಲ್ಲೂ ರಸಪ್ರಜ್ಞೆಯು ದಾಖಲಾಗಿರುವುದನ್ನು ಗುರುತಿಸಬಹುದು, ಅಜಿತಪುರಾಣದಲ್ಲಿ ಶಾಂತರಸ, ಅದ್ಭುತ ರಸದಂತಹ ಪ್ರಜ್ಞೆಗಳು ವಿಶೇಷವಾಗಿ ಅಲ್ಲಲ್ಲಿ ಕಂಡುಬರುತ್ತದೆ. ಅತ್ತಿಮಬ್ಬೆ ಮತ್ತು ಅಜಿತಸ್ವಾಮಿಯ ಧರ್ಮ ಪ್ರಜ್ಞೆಯ ಮೂಲಕ ಮೂಡುವ ಶಾಂತರಸದ ಪ್ರಜ್ಞೆಯನ್ನು ಸಹೃದಯರು ಅಭ್ಯಾಸಿಸುವಾಗ ಅನುಭವಿಸುತ್ತಾರೆ. ಅಭ್ಯಾಸದ ನಂತರವೂ ಕಾಡುತ್ತದೆ. ಆದರೆ ಗದಾಯುದ್ಧದಲ್ಲಿ ಭೀಮ, ದುರ್ಯೋಧನನ ವೀರತನದ, ಕಲಿತನದ, ಗರ್ವದ ಸ್ಥಿತಿ ವೀರರಸದ ಪ್ರಜ್ಞೆಯನ್ನು ಒಡಮೂಡಿಸುತ್ತದೆ.

**ನಿನ್ನಂ ಕೊಂದು ಗಡಮೊಳ**<br>**ನಿನ್ನು ಕೊಂದವವನಿಕ್ಕಿಕೊಲ್ಲದೆ ಮಾಣ್ದಾ**<br>**ನಿನ್ನುಮೊಳೆಂ ಗಡ ಸಾಲದೆ**<br>**ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ**

ದುಯೋಧನನ ಆಕ್ರೋಶ, ಭೀಮನ ಮೇಲಿನ ಸಿಟ್ಟು, ದ್ವೇಷವೆಲ್ಲವೂ ವೀರತನದ ಪ್ರಜ್ಞೆಯನ್ನು ಹೊರಹಾಕಿಸಿದೆ. ಭೀಮನನ್ನು ಕೊಲ್ಲದ ತನ್ನ ಅಸಹಾಯಕತೆಯಿಂದ ಮರಗುತ್ತಾನೆ. ತಮ್ಮನ ಸಾವಿಗೆ ಕಾರಣವಾಗಿರುವ ಭೀಮ ಸಾಯಬೇಕಿತ್ತು. ಇಲ್ಲವೇ ನಾನೇ ಸಾಯಬೇಕಿತ್ತೆಂಬ ಹತವಾದ ಜಿಗುಪ್ಸೆಯ ಮಾತುಗಳು ವೀರ, ಕರುಣ, ಜಿಗುಪ್ಸೆಯ ರಸದ ಪ್ರಜ್ಞೆಯನ್ನು ಮೂಡಿಸುತ್ತವೆ. ದುರ್ಯೋಧನನು ತನ್ನನ್ನು ತಾನು ನಿಂದಿಸಿಕೊಳ್ಳುವ ಪರಿ. ದುರ್ಯೋಧನನ ಪರ ನಿಂದು ವಾಚಿಸುವ ಸಹೃದಯರ ಮನಸ್ಸು ಮರುಕಪಡುತ್ತದೆ. ಇದು ನಿಜವಾಗಿಯು ರನ್ನನ ಕರುಣರಸದ ಪ್ರಜ್ಞೆಯ ಜಯ. ಈ ಕಾವ್ಯವನ್ನು ಓದುವ ಸಹೃದಯನಿಗೆ ರಸದ ಪಾಕವು ಲಭಿಸುವುದು ಸತ್ಯ. ಅದು ಯಾವ ಅಂಚಿನಿಂದಾದರೂ ಸರಿಯೇ! ಶಕ್ತಿಕವಿ ರನ್ನನ ಗದಾಯುದ್ಧದಲ್ಲಿ ಕಾಣಬಹುದು. ರನ್ನನು ಪಂಪನ ಪಥವನ್ನು ಅನುಸರಿಸಿದ ವನಾಗಿರುವುದರಿಂದ ಪಂಪನ ಹಾಗೆಯೇ ತನ್ನ ಕಾವ್ಯದಲ್ಲೂ ರಸಗಳ ಕುರಿತಾದ ನಿಲುವುಗಳನ್ನು ಪ್ರತಿಪಾದಿಸಿದ್ದಾನೆ.

**"ಆರವಮಂ ನಿರ್ಜಿತ ಕಂ**<br>**ಠೀರವರವಮಂ ನಿರಸ್ತ ಘನರವಮಂ ಕೋ**<br>**ಪಾರುಣ ನೇತ್ರಂ ಕೇಳ್ದಾ**

**ನೀರೊಳಗಿರ್ದುಂ ಬೆಮರ್ತನುರಗಪತಾಕಂ"**

ವೈಶಂಪಾಯನ ಸರೋವರದಲ್ಲಿ ಅಡಗಿದ್ದ ದುರ್ಯೋಧನನನ್ನು ಭೀಮ ಮೂದಲಿಸುವ ಸನ್ನಿವೇಶ ಪರಿಣಾಮಕಾರಿಯಾಗಿದೆ. ಭೀಮನ ಸಿಂಹಗರ್ಜನೆಗೆ ದುರ್ಯೋಧನ ಹೇಗೆ ಪ್ರತಿಕ್ರಿಯಿಸಿದ ಎಂಬುದನ್ನು ರನ್ನ ಸಶಕ್ತವಾಗಿ ಚಿತ್ರಿಸಿದ್ದಾನೆ. 'ನೀರೊಳಗಿರ್ದುಂ ಬೆಮರ್ತನುರಗ ಪತಾಕಂ" ಎಂಬುದು ರೌದ್ರರಸವನ್ನು ಸಹೃದಯ ಓದುಗನಲ್ಲಿ ಉದ್ದೀಪನಗೊಳಿಸುತ್ತದೆ. ಜೊತೆಗೆ ಪಾಂಡವರಿಗೆ ಹೆದರಿ ವೈಶಂಪಾಯನ ಸರೋವರದಲ್ಲಿ ದುರ್ಯೋಧನ ಅಡಗಿಕೊರುವುದು ಭಯದಿಂದ ಎಂದಾದರೆ ಭಯಾನಕ ರಸವನ್ನು ಪ್ರತಿಪಾದಿಸಿದ್ದಾನೆ ಎನ್ನಬೇಕು. 'ಆ ಕುರು ಧರೆಯೊಳ್ ಕುರುಪತಿಯನವಿಸಿದಂ ಪವನ ಸುತಂ' ಎನ್ನುವ ಮಾತು ಭೀಮನು ದುಯೋಧನನನ್ನು ಹುಡುಕುತ್ತಿರುವುದು ಇದು ದುರ್ಯೋಧನನ ಅಂತ್ಯವನ್ನ ಸೂಚಿಸುವುದು ದುರ್ಯೋಧನನ ನೆಲೆಯಲ್ಲಿ ಇದು ಕರುಣಾ ರಸವಾಗಿ ಕಂಡರೆ, ಭೀಮನ ನೆಲೆಯಲ್ಲಿ ವೀರರಸವಾಗಿ ಕಾಣುವುದು.

**ಉಡಿದಿರ್ದ ಕಯ್ದು ನೆತ್ತರ ।**
**ಕಡಲೊಳಗಡಿಗಡಿಗೆ ತಳಮನುರ್ಚುತ್ತಿರೆ ಕಾ ॥**
**ಲಿಡಲೆಡೆವಡೆಯದೆ ಕುರುಪಿತಿ**
**ದಡಿಗವೆಣಂಗಳನೆ ಮೆಟ್ಟಿ ನಡೆಯುತ್ತಿರ್ದಂ ॥**

ಅಕ್ಷೋಹಿಣಿ ಸೈನ್ಯದ ಒಡೆಯನಾದ ದುರ್ಯೋಧನನು ತನ್ನ ಮಗ, ತಮ್ಮ, ಸ್ನೇಹಿತ, ಕರ್ಣ, ದ್ರೋಣ ಮೊದಲಾದವರೆಲ್ಲರನ್ನು ಯುದ್ಧ ಭೋಮಿಯಲ್ಲಿ ಕಳೆದುಕೊಂಡು ಹೆಣಗಳನ್ನು ಅರಸುತ್ತ ಬರುವ ದೃಶ್ಯ ಕರುಣಾಜನಕವಾಗಿದೆ. ಇಲ್ಲಿ ರಕ್ತದ ಮುಡುವಿನಲ್ಲಿ ಮುರಿದು ಬಿದಿದ್ದ ಆಯುಧಗಳು ಹೆಜ್ಜೆ ಹೆಜ್ಜೆಗೂ ದುರ್ಯೋಧನನ ಅಂಗಾಲುಗಳಿಗೆ ಚುಚ್ಚುತ್ತಿದ್ದರೂ, ಕಾಲಿಡಲು ನೆಲಕಾಣದಿದ್ದಾಗ ದೊಡ್ಡ ದೊಡ್ಡ ಹೆಣಗಳ ಮೇಲೆ ಕಾಲಿಟ್ಟು ನಡೆಯುವ ದೃಶ್ಯ ಕರುಣಾರಸದ ಮಡುವಾಗಿದೆ.

**ಶೃಂಗಾರಮೆಸೆಯೆ ತರಳಾ ।**
**ಪಾಂಗದೆ ನಡೆನೋಡಿ ವೀರಭಟರಂ ತಮ್ಮ ॥**
**ತ್ಸಂಗದೊಳಿಟ್ಟುಯ್ವ ನಿಳಿಂ।**
**ಪಾಂಗನೆಯರನಂದು ನೋಡಿದಂ ಕುರುರಾಜಂ॥**

ಹೀಗೆ ಯುದ್ಧ ಭೂಮಿಯಲ್ಲಿ ಸತ್ತುಬಿದ್ದ ವೀರರನ್ನು ಅಪ್ಸರೆಯರು ಎತ್ತಿಕೊಂಡು ಹೋದರು ಎನ್ನುವ ಮಾತಿದು. ಶೃಂಗಾರ ರಸವನ್ನು ಸೂಸುವ ಕಾಡಿಗಣ್ಣುಗಳು ಉಳ್ಳ ದೇವತಾಸ್ತ್ರೀಯರು ವೀರಯೋಧರನ್ನು ತಮ್ಮ

ತೊಡೆಯೇರಿಸಿಕೊಂಡು ಕರೆದೊಯ್ಯುದರು ಎನ್ನುವಲ್ಲಿ ವೀರ ಮತ್ತು ಶೃಂಗಾರ ರಸದ ಪ್ರತಿಪಾದನೆಯನ್ನು ರನ್ನ ಮಾಡಿದ್ದಾನೆ.

ಒಟ್ಟಾರೆ ಪಂಪ–ರನ್ನರ ಕಾವ್ಯ ಜಗತ್ತಿಗೆ ಪ್ರವೇಶಿಸುವ ಸಹೃದಯರಿಗೆ ಆಂತರಿಕ–ಬಾಹ್ಯ ಜಗತ್ತಿನಿಂದ ಪಡೆದ ಪ್ರಚೋದನೆಗಳೊಂದಿಗೆ ಕಾವ್ಯ ಜಗತ್ತು ಕೂಡ ಸಮನ್ವಯಗೊಂಡು ಪ್ರಚೋದಿಸಿದಾಗ ಉಂಟಾಗುವ ರಸಾನುಭವವೇ ರಸಪ್ರಜ್ಞೆ, ಹೀಗೆ ರನ್ನನ ಗದಾಯುದ್ಧ ಕಾವ್ಯದ ಉದ್ದಕ್ಕೂ 'ರಸ' ಗಳ ಪ್ರತಿಪಾದನೆಯಾಗಿರುವುದನ್ನು ಕಾಣಬಹುದು, ಪ್ರತಿಯೊಂದು ರಸಕ್ಕೂ ಒಂದಕ್ಕೂ ಹೆಚ್ಚು ಹೆಚ್ಚು ಪದ್ಯಗಳನ್ನು ಉದಾಹರಣೆ ನೀಡಲು ಸಾಧ್ಯವಾಗುತ್ತದೆ. ಈ ಲೇಖನದ ದೃಷ್ಟಿಯಿಂದ ಕೆಲವೊಂದು ಆಯ್ದು ಪದ್ಯಗಳನ್ನು ನೀಡಿದ್ದೇನೆ. ರನ್ನನು ತನ್ನ ಕಾವ್ಯದ ರಚನೆಯ ಪರಿಮಿತಿಯು 18 ವರ್ಣನೆಯ ನಡುವೆ ನವರಸಗಳ ಪ್ರಸ್ತಾಪವನ್ನು ಮತ್ತೆ ಮತ್ತೆ ತುರುತ್ತಾನೆ. ಎಷ್ಟೇಯಾದರು ಈ ಕಾವ್ಯ ರಚನೆಯ ಕ್ರಮ ಸಿಂಹಾವಲೋಕನ ಅಲ್ಲವೇ? ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ರಸಗಳ ಸೂತ್ರದ ಪರಿಕಲ್ಪನೆಯನ್ನು ಚರ್ಚೆ ಮಾಡಿದ್ದರೆ, ಪಂಪ–ರನ್ನರ ಕಾವ್ಯದಲ್ಲಿ ರಸಗಳು ಪ್ರತಿಪಾದನೆಗೊಂಡಿರುವ ಸ್ವರೂಪದ ಮಾದರಿ ಪದ್ಯಗಳನ್ನು ಕಾಣಬಹುದು, ಇದು ಪಂಪ–ರನ್ನರು ಭಾರತೀಯ ಮೀಮಾಂಸೆಗೆ ಕೊಟ್ಟ ಕೊಡುಗೆ ಎಂದು ನಾನು ಭಾವಿಸುತ್ತೇನೆ.

**ಪರಾಮರ್ಶನ ಗ್ರಂಥಗಳು:**

1. ಪಂಪ ಮಹಾಕವಿ ವಿರಚಿತ ಆದಿಪುರಾಣಂ (ಗದ್ಯಾನುವಾದ) (2013), ಕೆ. ಎಲ್. ನರಸಿಂಹಶಾಸ್ತ್ರೀ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
2. ಕವಿ ಚಕ್ರವರ್ತಿ ಕವಿರನ್ನ ವಿರಚಿತ ಸಾಹಸಭೀಮ ವಿಜಯಂ (2013), ಆರ್. ವಿ ಕುಲಕರ್ಣಿ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
3. ಪಂಪಭಾತರ ದೀಪಿಕೆ (1971), ಡಾ. ಡಿ. ಎಲ್. ನರಸಿಂಹಾಚಾರ್, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು.
4. ಪಂಪ: ಒಂದು ಅಧ್ಯಾಯನ (2014), ಡಾ. ಜಿ. ಎಸ್. ಶಿವರುದ್ರಪ್ಪ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
5. ನಾಡೋಜ ಪಂಪ (2006), ಮುಳಿಯ ತಿಮ್ಮಪ್ಪಯ್ಯ, ಕನ್ನಡ ಮತ್ತು ಸಂಸ್ಕೃತಿ

ಇಲಾಖೆ, ಬೆಂಗಳೂರು.

6. ಪಂಪ ಮಹಾಕವಿ ವಿರಚಿತ ಆದಿಪುರಾಣಂ (ಗದ್ಯಾನುವಾದ) (2001), ಕೆ. ಎಲ್. ನರಸಿಂಹಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
7. ಸೌಂದರ್ಯ ಸಮೀಕ್ಷೆ (2009), ಡಾ. ಜಿ. ಎಸ್. ಶಿವರುದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
8. ಭಾರತೀಯ ಕಾವ್ಯ ಮೀಮಾಂಸೆ (2006), ತೀ. ನಂ. ಶ್ರೀಕಂಠಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
9. ಕಾವ್ಯಾರ್ಥ ಚಿಂತನ (2009), ಡಾ. ಜಿ. ಎಸ್. ಶಿವರುದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
10. ಕನ್ನಡ ಸಾಹಿತ್ಯ ಮೀಮಾಂಸೆ ಕಟ್ಟುವ ಬಗೆ (2012), (ಸಂ) ಡಾ. ಬಿ. ಬಿ. ಸುವರ್ಣ, ಕನ್ನಡ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.
11. ಕವಿ ಚಕ್ರವರ್ತಿ ಕವಿರನ್ನ ವಿರಚಿತ–ಸಾಹಸಭೀಮಂ ವಿಜಯಂ (ಗದ್ಯಾನುವಾದ) (2013), ಆರ್. ವಿ ಕುಲಕರ್ಣಿ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
12. ಚಂಪೂಕವಿಗಳು (2008), ಡಾ. ಪಿ. ವಿ. ನಾರಾಯಣ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
13. ಪಂಪ ಭಾರತಕಥಾಲೋಕ (2012), ಆರ್. ಎಲ್. ಅನಂತರಾಮಯ್ಯ, ಸಾಧನ ಪ್ರಕಾಶನ, ಬೆಂಗಳೂರು.